


ತಾರಾ ಮತ್ತು ಜಯಂತಿಯೊಂದಿಗೆ..

ಸಿನಿಮಾ ರಂಗದ ಒಂದು ವೈಶಿಷ್ಟ್ಯವೆಂದರೆ ಇಲ್ಲಿ ನಟನೆ ಒಂದೇ ಮುಖ್ಯವಲ್ಲ. ಕಥೆಯನ್ನು ನಿರ್ದೇಶಕ ಕಟ್ಟಿಕೊಡುವ ಕ್ರಮ ಇದೆಯಲ್ಲ, ಅದರಲ್ಲೊಂದು ಹರಿವು ಇದೆಯಲ್ಲ– ಅದು ಮುಖ್ಯ. ಅಲ್ಲಿ ಸಾಹಿತ್ಯ ಮಾತ್ರವಲ್ಲ, ಬೇರೆ ಬೇರೆ ರೀತಿಯ ಕ್ರಾಫ್ಟ್‌ಗಳನ್ನು ಒಂದುಗೂಡಿಸುವುದು ಬಹು ಮುಖ್ಯ. 70–80 ಜನರನ್ನು ಕಟ್ಟಿಕೊಂಡು, 20–30 ಕ್ರಾಫ್ಟ್‌ಗಳನ್ನು ಅದರಲ್ಲಿ ಪೋಣಿಸಿಕೊಂಡು ಸಿನಿಮಾ ಮುಗಿಸುವುದೆಂದರೆ ಅದೊಂದು ದೊಡ್ಡ ಯಜ್ಞವೇ ಆಗಿತ್ತು.

ಇವತ್ತು ಕನ್ನಡದಲ್ಲಿ ಸಿನಿಮಾಗಳ ಸಂಖ್ಯೆ 4000 ದಾಟಿದೆ ಎನ್ನುವ ಹೆಮ್ಮೆಯಲ್ಲಿದ್ದೇವೆ. ಆದರೆ ಆ ಹಳೆಯ ಸಿನಿಮಾಗಳ ಪಟ್ಟಿಯನ್ನೊಮ್ಮೆ ನೋಡಿ– ಮುಕ್ಕಾಲು ಭಾಗ, ಅಂದರೆ ಸರಿಸುಮಾರು 3000 ಚಿತ್ರಗಳು ನಿರ್ಮಾಪಕರ ಕೈಕಚ್ಚಿದವೇ. ಹತ್ತು ಪರ್ಸೆಂಟ್ ಹಾಕಿದ ಬಂಡವಾಳ ವಾಪಸ್ ಬಂದರೆ, ಉಳಿದವು ಹಿಟ್– ಸೂಪರ್‌ಹಿಟ್ ಎಂದು ಪರಿಗಣಿಸುವಂಥವು. ನಮ್ಮ ಚಿತ್ರರಂಗವನ್ನು ಕಟ್ಟುವಲ್ಲಿ ಈ ಗೆದ್ದ ಸಿನಿಮಾಗಳ ಕೊಡುಗೆಯ ಬಗ್ಗೆ ಸಾಕಷ್ಟು ಮಾತನಾಡಿದ್ದೇವೆ. ಆದರೆ ಸೋತವರು ಇದ್ದಾರಲ್ಲ... ಸಿನಿಮಾ ನಿರ್ಮಿಸಿ ಕೈಸುಟ್ಟುಕೊಂಡು, ಮನೆ ಮಠಗಳನ್ನು ಮಾರಿಕೊಂಡು ಹೋದರಲ್ಲಾ.. ಅವರಲ್ಲಿ ಎಷ್ಟು ಮಂದಿಯನ್ನು ನೆನಪಿಟ್ಟುಕೊಂಡಿದ್ದೇವೆ? 83 ವರ್ಷಗಳ ಕಾಲ ಹೀಗೆ ಚಿತ್ರರಂಗವನ್ನು ಕಟ್ಟಿದವರು ಯಾರು ಎನ್ನುವ ಪಟ್ಟಿಯೂ ನಮ್ಮಲ್ಲಿ ಇಲ್ಲ. ಹಾಗೆ ಕಳೆದುಕೊಂಡವರು, ಕಳೆದುಹೋದವರಿಗೆ ನಾನು ಕ್ರೆಡಿಟ್ ಕೊಡಲು ಬಯಸುತ್ತೇನೆ. ಮಳೆ ಬಂದಾಗ ದೀಪದ ಹುಳಗಳು ಹುಟ್ಟಿದಂತೆ ಎಷ್ಟೋ ಮಂದಿ ಚಿತ್ರರಂಗದಲ್ಲಿ ಹುಟ್ಟಿ ಪತಂಗಗಳಂತೆ ಬೆಂಕಿಯಲ್ಲಿ ಬೆಂದುಹೋಗಿದ್ದಾರೆ. ಇಂತಹ ಸಿನಿಮಾ ಮೋಹಿಗಳು ಇಲ್ಲವಾಗಿದ್ದಲ್ಲಿ ಬಹುಶಃ ಇವತ್ತು ಉದ್ಯಮ ಇಷ್ಟೊಂದು ಎತ್ತರಕ್ಕೆ ಬೆಳೆಯುತ್ತಲೇ ಇರಲಿಲ್ಲ.

ನಮ್ಮ ಚಿತ್ರೋದ್ಯಮವನ್ನು ಕಟ್ಟಿದ ಇನ್ನೊಂದು ವರ್ಗ ಕ್ಯಾಬರೆ ನರ್ತಕಿಯರದ್ದು. ಒಂದು ಕಾಲದಲ್ಲಿ ಸಿನಿಮಾಗೆ ಪ್ರೇಕ್ಷಕ ವರ್ಗವನ್ನು ಸೃಷ್ಟಿಸುವಲ್ಲಿ ಮಹತ್ವದ ಪಾತ್ರವನ್ನು ಇವರೂ ವಹಿಸಿದ್ದಾರೆ. ಇವತ್ತು ನಾವು ಅದನ್ನು ಐಟಂ ಸಾಂಗ್ ಎಂದು ಕರೆಯುತ್ತೇವೆ. ಅವರು ಜನರನ್ನು ಥಿಯೇಟರಿಗೆ ತಂದು ಕೂಡಿಸಿದರು. ಇವತ್ತಿನವರೆಗೂ ಈ ಕ್ಯಾಬರೆ ನರ್ತಕಿಯರಿಗೆ ಅಂಥ ಒಂದು ಪ್ರಶಸ್ತಿ ಕೊಟ್ಟಿದ್ದೇವಾ? ಅವರು ಗೌರವಯುತವಾಗಿ ತಮ್ಮ ಕಲೆಯನ್ನು ನಿರ್ವಹಿಸಿದರು. ಉದ್ಯಮ ಬೆಳೆಯಲು ಅವರ ಕೊಡುಗೆಯೂ ಇದೆ ಎಂದು ನಮಗೇಕೆ ಅನ್ನಿಸುವುದಿಲ್ಲ?

ಅದೃಷ್ಟದಿಂದ ಬೆಳೆದವರು, ದುರಾದೃಷ್ಟದಿಂದ ನಿರ್ಗಮಿಸಿದವರು, ಉದ್ಯಮದ ಜತೆಗೇ ಬೆಳೆದವರು, ಹೊರಗೆ ನಿಂತು ಸಹಾಯ ಮಾಡಿದವರು, ಪೋಷಕ ನಟರು, ಕ್ಯಾಮೆರಾ ಹಿಂದೆ ನಿಂತವರು, ಸ್ಟುಡಿಯೋಗಳಲ್ಲಿ ಜೀವ ತುಂಬಿದವರು, ಕ್ಲಾಪ್‌ಬಾಯ್ಸ್‌ ಗಳಿಂದ ಹಿಡಿದು ಸಾವಿರಾರು ಜನ ಉದ್ಯಮವನ್ನು ಬೆಳೆಸಿ ಈ ಹಂತಕ್ಕೆ ತಂದು ನಿಲ್ಲಿಸಿದ್ದಾರೆ.

ಈಗ 4000ದ ಮೈಲಿಗಲ್ಲನ್ನು ನಾವು ದಾಟಿದ್ದೇವೆ. ಇವತ್ತು ನಮ್ಮ ಉದ್ಯಮದ ಸ್ಥಿತಿ ಹೇಗಿದೆ? ಬೇರೆ ಭಾಷೆಗಳ ಉದ್ಯಮಕ್ಕೆ ಹೋಲಿಸಿದರೆ ನಾವು ಎಲ್ಲಿ ನಿಂತಿದ್ದೇವೆ? ಈ ಬಗ್ಗೆ ಒಂದಿಷ್ಟು ಚರ್ಚೆ ನಡೆಯಬೇಕು. ನನಗೆ ಕೆಲವು ಸಲ ಅನ್ನಿಸುತ್ತೆ– ಇವತ್ತು ನಮ್ಮ ಉದ್ಯಮ ಎಲ್ಲೋ ಒಂದು ಕಡೆ ಅನುಕಂಪದಲ್ಲಿ ಬದುಕಿದೆಯಾ? ಚಿತ್ರಗಳು ಯಶಸ್ಸು ಪಡೆಯಲಿಲ್ಲ ಎಂದಾದರೆ ನಾವು ಕಾರಣಗಳನ್ನು ಕೊಡುತ್ತಾ ಹೋಗುತ್ತೇವೆ. ಇತರ ಭಾಷೆಗಳ ಚಿತ್ರಗಳಿಂದ ನಮಗೆ ತೊಂದರೆ ಆಗ್ತಿದೆ ಎಂಬ ಭಾವನೆಯೂ ಇದೆ. ಅವರೂ ನಮ್ಮ ತರಹವೇ ಉದ್ಯಮದ ಎಲ್ಲ ಕಷ್ಟ ನಷ್ಟಗಳನ್ನು ಎದುರಿಸಿಯೇ ಸಿನಿಮಾಗಳನ್ನು ಮಾಡುತ್ತಾರಲ್ಲ? ಸಿನಿಮಾ ಅನ್ನೋದೇ ಒಂದು ಭಾಷೆ ಎನ್ನುವುದು ಇವತ್ತಿನ ಸತ್ಯ. ಅದನ್ನು ನಾವು ಗಮನಿಸಬೇಕು. ಹೊಸ ಸಿನಿಮಾ ಪರಿಭಾಷೆಗಳನ್ನು ರೂಢಿಸುವುದಕ್ಕೆ ಅವರ ಜತೆಗೆ ಸ್ಪರ್ಧೆ ನಡೆಸಬೇಕು. ನಮ್ಮ ಕನ್ನಡ ಉದ್ಯಮಕ್ಕೆ ಎಲ್ಲೋ ಮುದ್ದಾಟ ಅತಿಯಾಗಿದೆಯಾ? ಎಲ್ಲಕ್ಕೂ ಸರಕಾರದ ಮೇಲೆ ಅವಲಂಬನೆ ಎಷ್ಟು ಸರಿ? ಈವರೆಗೆ ಇಂತಹದ್ದನ್ನೆಲ್ಲ ಮಾಡಿದ್ದು ಸರಿ ಎಂದರೂ, ಇನ್ನು ಮುಂದೆಯೂ ಇದೆಲ್ಲ ಬೇಕಾ? ಈ ಅತಿಯಾದ ಮುದ್ದಾಟದಿಂದಾಗಿಯೇ ನಮ್ಮ ಉದ್ಯಮ ಕುಂಠಿತವಾಗುತ್ತಿದೆಯಾ? ಈ ಎಲ್ಲ ಪ್ರಶ್ನೆಗಳ ಬಗ್ಗೆಯೂ ಈ ಹಂತದಲ್ಲಿ ನಾವು ಆತ್ಮಾವಲೋಕನ ಮಾಡಬೇಕು ಅನ್ನಿಸುತ್ತೆ.

80ರ ದಶಕದಲ್ಲಿ ನಮ್ಮ ಉದ್ಯಮದಲ್ಲಿ ಡಬಲ್‌ಟ್ಯಾಕ್ಸ್ ಇತ್ತು. ಆಗಲೂ ದೊಡ್ಡ ಸಿನಿಮಾಗಳು ಬಂದವು, ದೊಡ್ಡ ಮಟ್ಟದಲ್ಲಿ ಯಶಸ್ವಿಯೂ ಆದವು. ಅದು ಹೇಗೆ ಸಾಧ್ಯವಾಯಿತು? ಟ್ಯಾಕ್ಸ್‌ಫ್ರೀ ಮಾಡಿದ ಬಳಿಕ ನಾವು ಇನ್ನಷ್ಟು ಎತ್ತರದ ಸಿನಿಮಾಗಳನ್ನು ಮಾಡಬೇಕಿತ್ತಲ್ಲ? ವಿನಾಯ್ತಿ ಬಂದ ಬಳಿಕ ಉದ್ಯಮಿಗಳು ಬೆಳೆದರು, ಆದರೆ ಉದ್ಯಮ ಬೆಳೆಯಲಿಲ್ಲ ಏಕೆ? ಇದರಿಂದಾಗಿಯೇ ನಮ್ಮಲ್ಲಿ ಗುಣಮಟ್ಟ ಕಡಿಮೆ ಆಗಿರಬಹುದೆ? ನಮ್ಮ ಸೃಜನಶೀಲತೆಯನ್ನು ಈ ತೆರನಾದ ಸೌಲಭ್ಯಗಳು ಕೊಲ್ಲುತ್ತಿವೆಯಾ? ಸರಕಾರದ ವಿಶೇಷ ಸವಲತ್ತುಗಳು ಕಲಾತ್ಮಕ ಸಿನಿಮಾಗಳಿಗೆ ಪ್ರೋತ್ಸಾಹ ಕೊಡಲು ಒಂದು ಸಂದರ್ಭದಲ್ಲಿ ಅಗತ್ಯವಾಗಿದ್ದವು. ಅದಕ್ಕಾಗಿ ಸರ್ಕಾರ ಕೆಲವು ನಿರ್ಧಾರಗಳನ್ನು ಕೈಗೊಂಡಿತು. ಆದರೆ ಕಮರ್ಷಿಯಲ್ ಸಿನಿಮಾ ಮಾಡುವವರು ನಮಗೂ ಆ ಸೌಲಭ್ಯ ಇರಲಿ ಎಂದು ಬಯಸಿದ್ದೇಕೆ? 10 ಕೋಟಿ ರೂಪಾಯಿಯ ಸಿನಿಮಾ ಮಾಡುವ ಶಕ್ತಿಯುಳ್ಳ ನಿರ್ಮಾಪಕ 10 ಲಕ್ಷದ ಸಬ್ಸಿಡಿಗೆ ಮುಗಿಬೀಳುವುದು ಏನನ್ನು ತೋರಿಸುತ್ತದೆ? ಈ ಪ್ರವೃತ್ತಿ ಬೆಳೀತಾ ಬೆಳೀತಾ ಒಳ್ಳೆಯದು ಕೆಟ್ಟದು ಎನ್ನುವ ವ್ಯತ್ಯಾಸವೂ ಹೊರಟುಹೋಯಿತು. ಒಳ್ಳೆಯ ಸಿನಿಮಾ ಅಂದರೆ ಇವತ್ತು ತುಂಬ ದುಡ್ಡು ಖರ್ಚು ಮಾಡಿದ ಸಿನಿಮಾ ಎನ್ನುವ ತತ್ತ್ವ ಹುಟ್ಟಿಕೊಂಡಿದೆ. ಜನ ನೋಡಿದ ಸಿನಿಮಾ ಎನ್ನುವವರಿದ್ದಾರೆ. ಯಾವ ಜನ? ಜನ ಅಂದರೆ ಯಾರು?

ಡಾ.ರಾಜ್ ಸಿನಿಮಾಗಳು ಇದನ್ನೆಲ್ಲ ನೋಡಿದವಾ? ಪುಟ್ಟಣ್ಣ, ಸಿದ್ದಲಿಂಗಯ್ಯ ಮುಂತಾದವರು  ಇಂತಹದಕ್ಕೆಲ್ಲ ಕಾದು ಕುಳಿತಿದ್ದರಾ? ಅವರ ಸಿನಿಮಾಗಳು ಗಟ್ಟಿಯಾಗಿದ್ದವು, ಓಡಿದವು. ಇವತ್ತು ನಮ್ಮ ನಿರ್ದೇಶಕರು, ನಿರ್ಮಾಪಕರು ಅಂತಹ ಧೈರ್ಯವನ್ನು ಬೆಳೆಸಿಕೊಳ್ಳಬೇಕು ಅನ್ನುತ್ತೆ.

ಸರ್ಕಾರ ಕನ್ನಡ ಚಿತ್ರೋದ್ಯಮಕ್ಕೆ ಸಾಕಷ್ಟು ಸೌಲಭ್ಯಗಳನ್ನು ಕಲ್ಪಿಸಿದೆ, ಅದನ್ನು ಅಭಿನಂದಿಸೋಣ. ಆದರೆ ಸರ್ಕಾರವೇ ಎಲ್ಲವನ್ನೂ ಮಾಡಬೇಕು ಎಂದು ಕಾದು ಕುಳಿತುಕೊಳ್ಳುವುದು ಎಷ್ಟು ಸರಿ? ಬೆಂಗಳೂರು ಇವತ್ತು ಜಾಗತಿಕ ಮಟ್ಟದಲ್ಲಿ ಅನಿಮೇಶನ್ ಸಿನಿಮಾ ಸೌಲಭ್ಯಗಳಿಗೆ ಹೆಸರುವಾಸಿಯಾಗಿದೆ. ಹಾಲಿವುಡ್‌ನಿಂದ ಬಂದು ಇಲ್ಲಿ ಸಿನಿಮಾ ಕೆಲಸ ಮಾಡಿಸಿಕೊಳ್ಳುತ್ತಾರೆ. ನಮ್ಮಲ್ಲಿ ಏಕೆ ಅಂತಹ ಎನಿಮೇಷನ್ ಚಿತ್ರಗಳು ತಯಾರಾಗುತ್ತಿಲ್ಲ? ನಮ್ಮ ಸಿನಿಮಾಗಳಿಗೆ ಮಾರುಕಟ್ಟೆ ಇಲ್ಲ ಎನ್ನುತ್ತಾರೆ. ಹಿಂದೆ ಊಟಿ, ಮುಂಬೈ, ದೆಹಲಿಗಳಲ್ಲಿ ನಮ್ಮ ಸಿನಿಮಾಗಳು ಓಡಿಲ್ಲವೆ? ನಾವು ಮಾರುಕಟ್ಟೆ ವಿಸ್ತರಿಸುವುದಕ್ಕೆ ಏನು ಪ್ರಯತ್ನಗಳನ್ನು ಮಾಡಿದ್ದೇವೆ ಅನ್ನುವುದೂ ಮುಖ್ಯ.

ಹಾಗೆ ನೋಡಿದರೆ ಟಿವಿ ಬಂದು ಕನ್ನಡ ಚಿತ್ರೋದ್ಯಮವನ್ನು ಉಳಿಸಿತು ಎನ್ನಬಹುದು. ಟಿವಿಯವರು ನಮ್ಮ ಸಿನಿಮಾಗಳನ್ನು ಖರೀದಿಸಿದರು, ತೋರಿಸಿದರು. ಸಿನಿಮಾಗಳಲ್ಲಿ ಕೆಲಸ ಇಲ್ಲದಾಗ ಟೀವಿ ಸೀರಿಯಲ್‌ಗಳಲ್ಲಿ ನಮ್ಮ ನೂರಾರು ಕಲಾವಿದರು, ತಂತ್ರಜ್ಞರು ಕೆಲಸ ಕಂಡುಕೊಂಡರು, ಬದುಕು ಕಟ್ಟಿಕೊಂಡರು. ಇವತ್ತಿಗೂ ಟಿವಿ ನೂರಾರು ಕಲಾವಿದರು, ತಂತ್ರಜ್ಞರಿಗೆ ಅನ್ನ ಕೊಡುತ್ತಿದೆ.

ಒಂದು ಉತ್ಪನ್ನವನ್ನು ಹೇಗೆಲ್ಲಾ ಮಾರಾಟ ಮಾಡಬಹುದು ಎನ್ನುವುದಕ್ಕೆ ನಮ್ಮಲ್ಲಿ ಹಲವು ರೀತಿಯ ಮಾರುಕಟ್ಟೆ ಸಂಶೋಧನೆಗಳು ನಡೆಯುತ್ತಿವೆ. ಸಿನಿಮಾ ಉದ್ಯಮದಲ್ಲೂ ಅದು ನಡೆಯಬೇಕು. ಎಲ್ಲ ಸಮಸ್ಯೆಗಳಿಗೂ ಸರ್ಕಾರದತ್ತ ಮುಖ ಮಾಡಿ ನಿಂತುಕೊಳ್ಳುವುದನ್ನು ಕಡಿಮೆ ಮಾಡಬೇಕು. 4000 ಸಿನಿಮಾ ಬಂದಿರುವ ಈ ಹಂತದಲ್ಲಿ ಈ ಸಾಧನೆ ಸಾಧ್ಯವಾದದ್ದಕ್ಕೆ ಸೋಲು– ಗೆಲುವುಗಳ ಮೂಲಕ ನೆರವಾದ ಎಲ್ಲ ಪೂರ್ವಸೂರಿಗಳನ್ನೂ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳೋಣ. ■